ಶ್ರೀ ಕೆ. ಶಿವಮೂರ್ತಿ.—ನಾವು, ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಹೋಗಿ ಉದ್ಘಾಟನೆ ಮಾಡಿ ಬಂದಿದ್ದೇವೆ.

೧೨-೩೦ ಪಿ.ಎಂ.

ಅಧ್ಯಕ್ಷರು.— ಸಂಬಂಧಪಟ್ಟ ಮಿನಿಸ್ಟರ್ ಇಲ್ಲ; ಬೇಕಾದರೆ ಮತ್ತೆ ಈ ವಿಷಯ ತೆಗೆದು ಕೊಳ್ಳೋಣ.

ಶ್ರೀ ಕೆ. ಶಿವಮೂರ್ತಿ.— ತಾವು ಭರವಸೆ ಕೊಟ್ಟರೆ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಇದ್ದಾಗ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆಂದು ನಾನು ನಿಮಗೆ ಭರವಸೆ ಕೊಡುತ್ತೇನೆ.

೩) ಕುಣಿಗಲ್ ಜನರಲ್ ಆಸ್ಪತ್ರೆಯ ಕಟ್ಟಡವನ್ನು ಪೂರ್ಣಗೊಳಿಸಲು ಒತ್ತಾಯ

ಶ್ರೀ ಕೆ. ಲಕ್ಕಪ್ಪ.— ನನ್ನದೂ ಕೂಡ ಅಷ್ಟೇ ಪ್ರಮುಖವಾದ ವಿಷಯ ಇದೆ. ಕುಣಿಗಲ್ ಜನರಲ್ ಆಸ್ಪತ್ರೆಗೆ ಪೂರ್ಣ ಪ್ರಮಾಣದ ಕಟ್ಟಡ ಇಲ್ಲದೆ ಆರ್ಥಿಕ ಮುಗ್ಗಟ್ಟಿನಿಂದ ಕೆಲಸ ಅರ್ಧದಲ್ಲಿಯೇ ನಿಂತಿರುವುದರಿಂದ, ಪೂರ್ಣಗೊಳಿಸುವ ಕೆಲಸಕ್ಕೆ ತುರ್ತು ಹಣವನ್ನು ಒದಗಿಸಿ ಕಟ್ಟಡವನ್ನು ಪೂರ್ಣಗೊಳಿಸಲು ತ್ವರಿತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿರುವುದರಿಂದ, ಕಟ್ಟಡವನ್ನು ಪೂರ್ಣಗೊಳಿಸಬೇಕೆಂದು ಸಾರ್ವಜನಿಕರ ಪರವಾಗಿ ನಾನು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).— ಈಗಾಗಲೇ ಮಾನ್ಯ ಸದಸ್ಯರು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ. ಬಹಳ ಮಟ್ಟಿಗೆ ಪರಿಹಾರ ದೊರಕಬಹುದು.....

4) ವೀರಪ್ಪನ್ ತಂಡದವರಿಂದ ಕೋಟಾ ನಾಯಕ ನನ್ನು ಕೊಂದಿರುವ ವಿಚಾರ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ಕುಖ್ಯಾತ ಕಳ್ಳಸಾಗಾಣಿದಾರ, ಆನೆ ಹಂತಕ ವೀರಪ್ಪನ್ ತಂಡದವರಿಂದ ವೀರಪ್ಪನ್ ಸ್ವಂತ ಸ್ಥಳವಾದ ಗೋಪೀನಾಥಮ್ ಹತ್ತಿರ ಕರ್ನಾಟಕದ ಪೋಲೀಸ್ ಪಡೆ ಇದ್ದೂ ಪೋಲೀಸರಿಗೆ ಕಣ್ ತಪ್ಪಿಸಿ ಅದೇ ಪ್ರದೇಶದ ಗ್ರಾಮಸ್ಥ ಕೋಟಾ ನಾಯಕ ಎಂಬುವನನ್ನು ಭಾನುವಾರ ನಸುಕಿನಲ್ಲಿ ಗುಂಡಿಟ್ಟು ಕೊಂದಿರುವ ವಿಚಾರ ಕುರಿತು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಈಗಾಗಲೇ ನಿಯಮ ೩೩ಳಿರ ಮೇರೆಗೆ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದಕ್ಕೆ ಪರಿಹಾರವನ್ನು ಕೊಡುವುದರ ಬಗ್ಗೆ ಅವರಿಗೆ ಪತ್ರವನ್ನೋ ಅಥವಾ ಉತ್ತರವನ್ನೋ ಸರ್ಕಾರದಿಂದ ಕಳಂಹಿಸಿಕೊಡುವ ಒಂದು ಸಂಪ್ರದಾಯ ಇದೆ. ಆದರೆ ತಮ್ಮ ಅಪ್ಪಣೆ ಪಡೆದು ಈ ಒಂದು ಲಿಖಿತ ಹೇಳಿಕೆಯನ್ನು ಓದುತ್ತೇನೆ'' ದಿನಾಂಕ ೧೭-೬-೯೦ ರಂದು ಬೆಳಗಿನ ಜಾವ ೩-೪೫ರ ಸಮಯದಲ್ಲಿ ಶ್ರೀ ಶ್ರೀನಿವಾಸ, ಉಪ ಸಂರಕ್ಷಣಾ ಅಧಿಕಾರಿ, ಮೊಕ್ಕಾಂ ಮಾಡಿರುವ ಗೋಪಿನಾಥಮ್ ಸ್ಕೂಲ್‌ಗೆ ಸ್ವಲ್ಪ ದೂರದಲ್ಲಿಯೇ ಗುಂಡು ಹಾರಿಸಿದ ಶಬ್ದವನ್ನು ಕೇಳಿದ ಕೂಡಲೇ ಅಲ್ಲಿಯೇ ವಾಸ್ತವಿಸಿ ಕೊಂಡಿರುವ ಮೂಲ ತಂಡದೊಂದಿಗೆ ಗುಂಡು ಹಾರಿಸಿದ ಶಬ್ದ ಕೇಳಿ ಸ್ಥಳಕ್ಕೆ ಧಾವಿಸಿರುತ್ತಾರೆ. ಅಲ್ಲಿ ಲಂಬಾಣಿ ಜನಾಂಗದ ಶ್ರೀ ಕೋಟಾ ನಾಯಕ್ ಎಂಬುವರು ತಮ್ಮ ಮನೆಯಲ್ಲಿ ಗುಂಡೇಟಿನಿಂದ ಮಂಚದ ಮೇಲೆ ಸತ್ತಿರುವುದು ಕಂಡು ಬಂದಿದೆ...

MR. SPEAKER.—I think I will allow a Calling Attention on this-